

ಕುಸುಬಿ ಎಣ್ಣೆ





ಗೋಧಿ, ಅಕ್ಕಿ, ನವಣೆ, ಕಾಳು ಕಡಿಗಳ ದಿನಸಿ ಅಂಗಡಿ



ಸ್ಥಳೀಯ ದಾಳಿಂಬೆ, ಸಪೋಟ (ಚಿಕ್ಕು) ಜೊತೆ ತರಹೇವಾರಿ ಹಣ್ಣುಗಳು

(6ನೇ ಪುಟದಿಂದ)

ಶೇಂಗಾ, ಶೇಂಗಾ ಚಟ್ನಿ, ಅಗಸೀ ಚಟ್ನಿ, ಕುಸುಬಿ ಎಣ್ಣೆ ಇಲ್ಲಿನದೇ ವಿಶೇಷ. ಮತ್ತೆಲ್ಲೂ ಸಿಗದ ರುಚಿ.

'ಚಾರಾಣೆಕಿ ಅದರಕ್/ಕೋತಿಂಬಿರ್, ಆಠಾಣೆಕಿ ಖೊಪ್ರಾ, ಏಕ್ ನೀಂಬೂ..' ಈಗಲೂ ಇಷ್ಟೇ ಕಮ್ಮಿ ಬಜೆಟ್‌ನ ತರಕಾರಿ ಕೊಳ್ಳುವ ಮುಸಲ್ಮಾನ, ಮರಾಠಾ, ಮಾಂಸಾಹಾರಿ ಗಿರಾಕಿಗಳಿದ್ದಾರೆ. ಇಷ್ಟರಲ್ಲೇ ರುಚಿಕಟ್ಟಾದ ಬಗಾರ್‌ಖಾನಾ (ವಗ್ಗರಣೆ ಅನ್ನ), ದಾಲಚಾ, ಘೋಷ್ ಶೇರವಾ(ಮಟನ್/ಚಿಕನ್ ಗ್ರೇವಿ), ಬಿರಿಯಾನಿ ಸವಿಯುವವರಿದ್ದಾರೆ. ಬಿಳಿಜೋಳದ ರೊಟ್ಟಿ, ಜವೇ ಗೋಧಿಯ ಚಪಾತಿ, ಹೋಳಿಗೆ, ಕರಚೀಕಾಯಿ ಶಾಖಾಹಾರಿಗಳ ಇಷ್ಟದ ಖಾದ್ಯವಾದ್ದರಿಂದ ಜಿಲ್ಲೆಯಲ್ಲೇ ಬೆಳೆವ ಬಿಳಿ ಜೋಳ,ಗೋಧಿ, ನವಣೆ, ಬೇಳೆ ಕಾಳುಗಳಿಗೆ ತುಂಬ ಡಿಮ್ಯಾಂಡ್. ಅವತ್ತಿಗೆ ಎಷ್ಟೋ ಅಷ್ಟನ್ನೇ ಕೊಂಡು ಸಾಕಾಗುವಷ್ಟು ಸವಿಯುವ ಈ ಜನ ನಾಳೆಯದು ನಾಳೆಗೆ ಎನ್ನುವ ನಿಲುವಿನವರು. 'ಕೂಡಿಡಬಾರದು. ಒಬ್ರ ತಿನಬಾರದು. ಎಷ್ಟ ಬೇಕೊ ಅಷ್ಟ ಕೂಡಿ ತಿನಬೇಕು..' ಎನ್ನುವುದಿವರ ಸರಳ ಫಿಲಾಸಫಿ.

ಇಂಥ ಸರಳ, ಸೀದಾ ಸಾದಾ ಗಿರಾಕಿಗಳ ಜೊತೆಗಿನ ವ್ಯಾಪಾರದಲ್ಲಿ ಲಾಭ, ಖುಷಿ, ಸಾರ್ಥಕತೆ ಕಂಡುಕೊಳ್ಳುವ ಎಲ್ಲ ಕೋಮಿನ ವ್ಯಾಪಾರಸ್ಥರಿದ್ದಾರೆ. ಇಸ್ಲಾಂ ಅನ್ನು ಅಪ್ಪಿಕೊಂಡಿರುವ ಇಲ್ಲಿನ ಬಾಗವಾನ ಸಮುದಾಯ ವಹಿವಾಟುವಿನಲ್ಲಿ ಮುಂಚೂಣಿಯಲ್ಲಿದೆ. ತರಕಾರಿ/ಹಣ್ಣುಗಳ ಮಾರುಕಟ್ಟೆಯನ್ನು ಬಹುಪಾಲು ಬಾಗವಾನರ ಮಹಿಳೆಯರೇ ಆವರಿಸಿದ್ದಾರೆ. ಇದು ಆಸಕ್ತಿದಾಯಕ ಮತ್ತು ಅಧ್ಯಯನಯೋಗ್ಯ. ಈ ಸಮುದಾಯ ವ್ಯಾಪಾರದಲ್ಲಿ ವಿಶ್ವದ ಎಲ್ಲೆಡೆ ರಫ್ತು ವಹಿವಾಟು ನಡೆಸುವಷ್ಟು ಬೆಳೆದಿದೆ. ಸಹಜ ಮತ್ತು ಸರಳತೆಯ ಬದಲಾಗಿ ಹೊಸ ಸೂಪರ್ ಬಜಾರ್, ಮೋರ್ ಷೋಕಿ ಬದುಕಿಗೂ ಇಲ್ಲಿನವರು ತೆರಕೊಂಡಿದ್ದಾರೆ. ಆದರೂ ಬಹುಪಾಲು ಜನರಿಗೆ ಈಗಲೂ ಶಾಸ್ತ್ರೀ ಮಾರ್ಕೆಟ್ ಅಚ್ಚುಮೆಚ್ಚು.

ಪೌಸೇರ್ ಎಣ್ಣೆ, ಪಾವ್ ಕಿಲೋ ಅಕ್ಕಿ, ಸೇರು ಗೋಧಿ ಕೊಳ್ಳುವಷ್ಟೇ ಸಾಮರ್ಥ್ಯದ ಅಥವಾ ಅಂಥದೊಂದು ಸರಳ ಜೀವನಶೈಲಿ ರೂಢಿಸಿಕೊಂಡ ದೊಡ್ಡ ಜನಸಮುದಾಯವೇ ಇಲ್ಲಿದೆ. ಕೃಷ್ಣಾ, ಭೀಮಾ ಸೇರಿದಂತೆ ಐದು ನದಿಗಳ ಜಿಲ್ಲೆಯಲ್ಲಿ ನೀರಿಗೆ ತತ್ವಾರ! ಬರಗಾಲ ಕಾಡುತ್ತಲೇ ಇರುತ್ತದೆ. ಇದರ ನಡುವೆಯೂ ಕೃಷಿ ಚಟುವಟಿಕೆಯೇ ಇಲ್ಲಿನ ಪ್ರಮುಖ ಕಸುಬು. ಶೇ 70ರಷ್ಟು ಜನ ಕೃಷಿಯನ್ನೇ ನಂಬಿ ಬದುಕುತ್ತಾರೆ. ಉತ್ಪನ್ನಗಳ ಅಸಲು ಜವಾರಿ ಮಾಲು ಬೇರೆಡೆ ರಫ್ತಾಗುವುದೇ ಹೆಚ್ಚು. ದೊಡ್ಡ ಕೃಷಿಕರಿಗೆ ರಫ್ತು ಮೊದಲ ಆಯ್ಕೆಯಂತಾಗಿದೆ. ಬಹುತೇಕ ಸಣ್ಣ, ಮಧ್ಯಮ ರೈತರ ಬೆಳೆ, ತರಕಾರಿ, ಹಣ್ಣುಗಳು ಈಗಲೂ ಸ್ಥಳೀಯ ಮಾರುಕಟ್ಟೆಯನ್ನೇ ನೆಚ್ಚಿಕೊಂಡಿವೆ. ಕೂಡಿ ಬೆಳೆಯುವ ಮತ್ತು ಹಂಚಿಕೊಂಡು ತಿನ್ನುವ ಸಾಮರಸ್ಯದ ನಾಗರಿಕತೆ ಇಲ್ಲಿನದು. ಇದುವೇ ಬಿಜಾಪುರಿ ಜಿಂದಗಿ. ಸುಪ್ರಸಿದ್ಧ ಗೋಲಗುಂಬಜ್ ಹೊಂದಿದ ವಿಜಯಪುರದ ಶಾಸ್ತ್ರೀ ಮಾರುಕಟ್ಟೆ, ಭಾಗದ ಜೀವಪರ ಬದುಕಿಗೊಂದು ನಿದರ್ಶನದಂತಿದೆ. ಸರಳತೆಯ ಸೂಫಿ, ಶರಣ ತತ್ವಗಳ ಸಮನ್ವಯದ ಸಮೃದ್ಧ ನಾಗರಿಕತೆಯನ್ನು ಒಪ್ಪಿ ಅಳವಡಿಸಿಕೊಂಡಿದ್ದು ಈ ಮಾರುಕಟ್ಟೆಯ ಅನನ್ಯತೆ. ವಿಜಯಪುರಕ್ಕೆ ಭೇಟಿ ನೀಡಿದರೆ ಗೋಲಗುಂಬಜ್ ವೀಕ್ಷಣೆಯ ನಂತರ ಶಾಸ್ತ್ರೀ ಮಾರ್ಕೆಟ್ ಸುತ್ತಿ ತಾಜಾ ಹಣ್ಣು ಮತ್ತು ತರಕಾರಿ ರುಚಿಯನ್ನೂ ಸವಿದು ಬನ್ನಿ.